ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ

ದಿನಾಂಕ : DATE : 28/05/2019

# ಸಿಕ್ಕಿಂನಲ್ಲಿ ವಾರಕ್ಕೆ ಐದೇ ದಿನ ಕೆಲಸ: ಸಿಎಂ

ಕ.ಪ್ರ 28/5/19

## ಸಚಿವರಿಗೆ ಫಾರ್ಚೂನರ್ ಬದಲು ಸ್ಕಾರ್ಪಿಯೋ ಕಾರು: ಹೊಸ ಸಿಎಂ ಘೋಷಣೆ

ಗ್ಯಾಂಗ್ಟಕ್: ಸಿಕ್ಕಿಂ ವಿಧಾನಸಭೆ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಪಕ್ಷದ ಪಿ.ಎಸ್. ಗೋಲೆ ಅವರು ಸೋಮವಾರ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಇದರ ಬೆನ್ನಲ್ಲೇ ಅವರು ಸರ್ಕಾರಿ ನೌಕರರಿಗೆ ಭರ್ಜರಿ ಕೊಡುಗೆ ನೀಡಿದ್ದಾರೆ. ಸರ್ಕಾರಿ ನೌಕರರು ಇನ್ನು ವಾರದ 6 ದಿನ ಬದಲು 5 ದಿನ ಕೆಲಸ ಮಾಡಿದರೆ ಸಾಕು. ಈ ಸಂಬಂಧ ಚುನಾವಣೆಪೂರ್ವ ನೀಡಿದ್ದ ಭರವಸೆಯನ್ನು ಈಡೇರಿಸುತ್ತಿರುವುದಾಗಿ ತಿಳಿಸಿದ್ದಾರೆ. ಇದೇ ವೇಳೆ, ತಾವೂ ಸೇರಿದಂತೆ ಸಚಿವರು, ಶಾಸಕರು ಇನ್ನು ಮುಂದೆ ಫಾರ್ಚೂನರ್ ಕಾರು ಬಳಸುವುದಿಲ್ಲ, ಬದಲಾಗಿ ಸ್ಕಾರ್ಪಿಯೋ ಕಾರು ಬಳಸುತ್ತೇವೆ. ಸ್ಕಾರ್ಪಿಯೋ ಕಾರು ಲಭ್ಯವಾಗುವವರೆಗೆ ಫಾರ್ಚೂನರ್‌ನಲ್ಲಿ ಓಡಾಡುತ್ತೇವೆ ಎಂದಿದ್ದಾರೆ. ಇನ್ನು ಚುನಾವಣಾ ಭರವಸೆಯಂತೆ ರಾಜ್ಯದ ಎಲ್ಲಾ ನಾಗರಿಕರಿಗೆ ಕನಿಷ್ಠ ಆದಾಯ ಯೋಜನೆ ಜಾರಿ ಮಾಡುವ ಬಗ್ಗೆಯೂ ಸರ್ಕಾರ ಮುಂದಿನ ದಿನಗಳಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

## ಸಿಕ್ಕಿಂ ಸಿಎಂ ಆಗಿ ತಮಾಂಗ್ ಪ್ರಮಾಣ



ಗ್ಯಾಂಗ್ಟಕ್: ಪಿ.ಎಸ್. ಗೋಲೆ ಎಂಬ ಹೆಸರಿನಿಂದ ಜನಪ್ರಿಯರಾದ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಅಧ್ಯಕ್ಷ ಪ್ರೇಮ್ ಸಿಂಗ್ ತಮಾಂಗ್ ಸೋಮವಾರ ಸಿಕ್ಕಿಂನ 6ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಪಾಲ್ಜೋರ್ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಜೊತೆಗೆ 11 ನೂತನ ಸಚಿವರೂ ರಾಜ್ಯಪಾಲ ಗಂಗಾ ಪ್ರಸಾದ್‌ರಿಂದ ಪ್ರಮಾಣ ವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಮತ್ತು ಎಸ್‌ಡಿಎಫ್ ಮುಖಂಡರ ಕೊರತೆ ಎದ್ದುಕಾಣುತ್ತಿತ್ತು. 32 ಸದಸ್ಯಬಲದ ವಿಧಾನಸಭೆಯಲ್ಲಿ 17 ಸ್ಥಾನಗಳಲ್ಲಿ ಎಸ್‌ಕೆಎಂ ಜಯಗಳಿಸಿತ್ತು. ಎಸ್‌ಡಿಎಫ್ 15 ಸ್ಥಾನಗಳಿಸಿತ್ತು. ತಮಾಂಗ್ ಪ್ರಸ್ತುತ ವಿಧಾನಸಭಾ ಸದಸ್ಯರಲ್ಲ, ಅವರು ಮತ್ತೆ ಉಪಚುನಾವಣೆಯಲ್ಲಿ ಸ್ಪರ್ಧಿಸಿ ವಿಧಾನಸಭೆಗೆ ಆಯ್ಕೆಯಾಗಬೇಕಿದೆ.

14